ನಗು ಬಂತು. ಇವತ್ತು ಕುಳಿತ ಹಕ್ಕಿ ನಿನ್ನೆಯದೇ ಎಂದು ನಿಖರವಾಗಿ ಹೇಳುವುದು ಹೇಗೆ? ನಿನ್ನೆಯ ಹಾಗೆಯೇ ಕಾರಿನ ಬಾನೆಟ್ ಮೇಲೆ ಕುಳಿತಾಕ್ಷಣ ಹಕ್ಕಿ ಅದುವೇ ಎಂದು ನಾನು ಹೇಗೆ ತರ್ಕಿಸಿದೆ? ಅನಗತ್ಯ ಗೊಂದಲ ಮಾಡಿಕೊಳ್ಳುತ್ತಿದ್ದೇನೆ ಎನಿಸಿತು. ಅದು ನಿನ್ನೆಯದೇ ಹಕ್ಕಿ, ಅಥವಾ ಬೇರೆ ಹಕ್ಕಿ. ನನಗೇನಂತೆ! ಹಕ್ಕಿಯ ವಿಚಾರಕ್ಕೆ ತಲೆಕೆಡಿಸಿಕೊಳ್ಳಬೇಡ ಎಂದಿತು ಮನಸ್ಸು. ಬೈಕಿನವರು ತೀರ ಹತ್ತಿರಕ್ಕೆ ಬಂದಾಗ ಇನ್ನೊಂದು ವೈಪರಿನ ಕೊನೆಗೆ ಬಿರ್ರನೆ ಹಾರುತ್ತಿದ್ದ ಹಕ್ಕಿ ಅವರು ದೂರ ಹೋಗುತ್ತಿದ್ದಂತೆ ನೇರ ನನ್ನ ಎದುರಿಗೆ ವೈಪರಿನ ಮೇಲೆ ಬಂದು ಕುಳಿತುಕೊಳ್ಳುತ್ತಿತ್ತು. ಇದು ನಿನ್ನೆಯ ಹಕ್ಕಿ. ನಿನ್ನೆಯ ಹಾಗೆಯೇ ಇಂದೂ ಬಂದು ಕುಳಿತಿದೆ. ರಾಜಕೀಯದವರಾದರೆ ಇಷ್ಟು ಹೊತ್ತಿನಲ್ಲಿ ಇದು ಅಪಶಕುನ ಎಂದು ಕಾರು ಮಾರಿ ಕೈ ತೊಳೆದುಕೊಳ್ಳುತ್ತಿದ್ದರು!

ನನ್ನ ಮನಸ್ಸು ಏನೇನೋ ಯೋಚಿಸುತ್ತಿತ್ತು. ನಾನು ಆದಷ್ಟೂ ಹಕ್ಕಿಯನ್ನು ಲೆಕ್ಕಿಸದೇ ಇರಲು ಪ್ರಯತ್ನ ಮಾಡಿ ಕಾರು ಚಲಾಯಿಸುತ್ತಿದ್ದೆ. "ನೀನು ನನ್ನ ಆಟ ನೋಡು, ನೋಡದೆ ಇರು, ನಾನಂತೂ ಆಟ ತೋರಿಸುತ್ತಲೇ ಇರುತ್ತೇನೆ" ಎಂಬಂತೆ ಕ್ಯಾಟ್ ವಾಕ್, ಪೊಲೀಸು ಸಿಗ್ನಲ್ಲು ಇಂದೂ ತೋರಿಸಿದ ಹಕ್ಕಿ ಇಂದು ಹೊಸದಾಗಿ ಕೆಲ ಯೋಗ ಪೋಸುಗಳನ್ನೂ ಪ್ರದರ್ಶಿಸಿತು. ಕಾಲುಗಳ ನಡುವೆ ತಲೆ ಹೊಕ್ಕಿಸಿ ಅದು ಮಾಡಿದ ಪರ್ವತಾಸನ ನನಗೆ ಇಷ್ಟವಾಯಿತು. ಅದರ ಡೆಸ್ಟಿನೇಶನ್ ಅಶೋಕ ಹೋಟೆಲ್ ಬರುತ್ತಲೇ ನನಗೆ ಕುತೂಹಲ! ಸರಿಯಾಗಿ ಅಶೋಕ ಹೋಟೆಲಿನ ಬಳಿಯ ರಸ್ತೆಯೆದುರಾದಾಗ ಹಕ್ಕಿ ಹಾರಿ ಕಣ್ಮರೆಯಾಯಿತು! ಎಲಾಎಲಾ!... ಸತತ ಎರಡನೇ ದಿನವೂ ಅದೇ ಜಾಗದಲ್ಲಿ ಏರಿ ಕುಳಿತು ನಿರ್ದಿಷ್ಟ ಜಾಗದಲ್ಲೇ ಇಳಿದು ಹೋದ ಪರಿ ಕಲ್ಪನೆಗೂ ಮೀರಿದ್ದು! ಇದು ನಿನ್ನೆಯದೇ ಹಕ್ಕಿ. ಈ ಹಕ್ಕಿಗೆ ದಿನಾ ಇಲ್ಲಿಗೆ ಬರುವ ಜರೂರತ್ತಿದೆ. ನನ್ನ ಮನಸ್ಸು ಆಗಲೇ ಕೆಲವು ನಿರ್ಧಾರಗಳನ್ನು ಮಾಡಿತ್ತು. ಹಕ್ಕಿಯೊಂದು ಇಂತಹ ಕೌತುಕ ಪ್ರದರ್ಶಿಸುತ್ತಿದೆ ಎಂದರೆ! ನಾಲ್ಕುಮಂದಿಗೆ ಹೇಳಿದರೆ ಬಿಟ್ಟಿ ಪ್ರಚಾರ ಸಿಕ್ಕೀತು ಅನಿಸಿತ್ತು ನನಗೆ.

ಪೆಟ್ರೋಲು ಹಾಕಬೇಕಿದ್ದರಿಂದ ಮರುದಿನ ಹತ್ತು ನಿಮಿಷ ಮೊದಲೇ ಹೊರಟಿದ್ದೆ. ಕಾರಿನ ಬಳಿ ಬಂದಾಗ ಪುನಃ ಹಕ್ಕಿ ನೆನಪಾಯಿತು. ಕಾರಿನ ಬಾನೆಟ್ ಖಾಲಿಯಾಗಿತ್ತು. ಕತ್ತೆತ್ತಿ ಅಲ್ಲಿದ್ದ ಎರಡು ಮರಗಳಲ್ಲಿ ಕಣ್ಣು ಹಾಯಿಸಿದೆ. ಮರಗಳ ಮೇಲೆಲ್ಲೂ ಕಾಣಿಸಲಿಲ್ಲ. ಮನಸ್ಸಿನಲ್ಲಿ ನನಗೇನೋ ಕಳವಳ. ಕಾರು ಸ್ಟಾರ್ಟ್ ಮಾಡುತ್ತಿದ್ದಂತೆ ಎರಡು ಹಕ್ಕಿಗಳು ರೊಯ್ಯನೆ ಹಾರಿ ಬಂದವು. ಓಹೋ ಇವತ್ತು ಎರಡಿವೆ ಎಂದುಕೊಳ್ಳುತ್ತಿದ್ದಂತೆ ಅವುಗಳಲ್ಲೊಂದು ನನ್ನ ಕಾರಿನ ಬಾನೆಟ್ ಮೇಲೆ ಕುಳಿತರೆ ಇನ್ನೊಂದು ಅಲ್ಲೇ ಯು ಟರ್ನ್ ಹೊಡೆದು ಹಿಂದೆ ಹಾರಿ ಹೋಯಿತು! ನನಗೆ ಸಂತೋಷವಾಯಿತು! ನನ್ನಲ್ಲೇ ಯೋಚಿಸಲಾರಂಭಿಸಿದೆ. ಕಾರಿನ ಮೇಲೆ ಎಂದಿನಂತೆ ಬಂದು ಕುಳಿತದ್ದು ಗಂಡು ಅಥವಾ ಗಂಡ ಹಕ್ಕಿ. ಬೈಬೈ ಹೇಳಲು ಬಂದು ಹಿಂದೆ ಹಾರಿ ಹೋದ ಹಕ್ಕಿ ಹೆಣ್ಣು ಅಥವಾ ಹೆಂಡತಿ ಹಕ್ಕಿ. ತನ್ನ ಕಾರನ್ನು ಅಥವಾ ಕಾರಿನ ಡ್ರೈವರನನ್ನು ತೋರಿಸಲು ಕರೆತಂದಿರಬೇಕು. ಅಂತೂ ನನ್ನ ತಲೆಯಲ್ಲಿ ಆ ಹಕ್ಕಿ ನೆಲೆನಿಂತು ಗೂಡು ಕಟ್ಟಿ ಕುಟುಂಬದೊಂದಿಗೆ ಗಟ್ಟಿಯಾಗಿ ನೆಲೆಸಿತ್ತು. ನಾನು ಕಾರನ್ನು ಪೆಟ್ರೋಲು ಬಂಕಿಗೆ ತಿರುಗಿಸುತ್ತಿದ್ದಂತೆ ಆಚೀಚೆ ನಾಲ್ಕಾರು ಬಾರಿ ನೋಡಿದ ಹಕ್ಕಿ ತಟಕ್ಕನೆ ಹಾರಿ ಎದುರಿಗಿದ್ದ ದೊಡ್ಡ ನಾಮಫಲಕದ ಮೇಲೆ ಕೂತಿತು. ಪೆಟ್ರೋಲು ಹಾಕಿ ನಾನು ಪುನಃ ರಸ್ತೆಗೆ ವಾಪಸ್ ಬಂದಾಗ ನೆಮ್ಮದಿಯಿಂದ ಹಾರಿಬಂದ ಹಕ್ಕಿ ಪುನಃ ವೈಪರನ್ನಾಶ್ರಯಿಸಿತು. ಭಲೇ ಜಾಣ ಹಕ್ಕಿ ಎಂದುಕೊಂಡೆ ನಾನು.

ರಾತ್ರಿ ಕಾರಲ್ಲಿ ಅಶೋಕ ಹೋಟೆಲಿನ ಬಳಿ ಬರುತ್ತಿದ್ದಂತೆ ಹಕ್ಕಿಯ ನೆನಪು ಬಂದು ಇದನ್ನು ಯಾರಿಗಾದರೂ ಹೇಳೋಣ ಅನಿಸಿತು... ಅಮ್ಮ ನಾನು ಹೇಳಿದ್ದನ್ನೆಲ್ಲ ಅನುಮಾನಿಸದೆ ನಂಬುವವಳು. ಅವಳಲ್ಲಿ ಹೇಳಬಹುದು. ಇನ್ನುಳಿದ ಯಾರೇ ಆದರೂ ಒಂದು ನಿಮಿಷ